**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಯವರ ನ್ಯಾಯಾಲಯ, ಮಡಿಕೇರಿ**

**ಸಿ. ಸಿ. ಸಂಖ್ಯೆ: 2072/2024**

ಆರೋಪಿ

ಪಿ.ಜಗದೀಶ್,
ತಂದೆಃ ಎಂ.ತಿಮ್ಮಪ್ಪ,
ಪ್ರಾಯ 58 ವರ್ಷ,
ವಾಸಃ ಪ್ರಭಾತ್ ಟಾಕೀಸ್,
ರೈಲ್ವೇ ಸ್ಟೇಷನ್ ಹತ್ತಿರ,
ಚಿತ್ರದುರ್ಗ-577501.

**ಬಿ.ಎನ್.ಎಸ್.ಎಸ್. ಕಲಂ 351 ರನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ: 1 ಫ್ರಾಸಾ-1 ಮತ್ತು ಫ್ರಾಸಾ-2ರವರು ನ್ಯಾಯಾಲಯದ ಮುಂದೆ ನುಡಿದ ಸಾಕ್ಷ್ಯವನ್ನು ತಿಳಿದುಕೊಂಡಿದ್ದೀರಾ?

ಉತ್ತರಃ ತಿಳಿದುಕೊಂಡಿದ್ದೇನೆ.

ಪ್ರಶ್ನೆ:2 ಫ್ರಾಸಾ-1 ರತ್ನಮ್ಮ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನ್ನ ಮಗಳಾದ ಅಮೃತ, ಗಿರೀಶ್ ಟಿ ಗೆ ಹಣವನ್ನು ಪಾವತಿ ಮಾಡಿರುವ ಟ್ರ್ಯಾನ್ಸಾಕ್ಷನ್ ಗೆ ಸಂಬಂಧ ಪಟ್ಟ ದಾಖಲೆಗಳ ದೃಢೀಕೃತ ನಕಲನ್ನು 18ಪುಟಗಳು) ನಿಪಿ-6 ಎಂದು, ದಿಃ 23.02.2023 ರಂದು ತಾನು ಗಿರೀಶ್ ಟಿ ರವರ ಕೆನರಾ ಬ್ಯಾಂಕ್ ಮಡಿಕೇರಿ ಬ್ರ್ಯಾಂಚ್ ಖಾತೆ ಸಂಖ್ಯೆ 17392610016118 ಗೆ ರೂ.2 ಲಕ್ಷ ಹಣವನ್ನು ಡೆಪಾಸಿಟ್ ಮಾಡಿರುವ ಬಾಪ್ತು ಡೆಪಾಸಿಟ್ ಸ್ಲಿಪ್ ನ ದೃಢೀಕೃತ ನಕಲನ್ನು ನಿಪಿ-7 ಎಂದು, ದಿಃ 17.08.2023 ರಂದು ತಾನು ಗಿರೀಶ್ ಟಿ ರವರ ಕೆನರಾ ಬ್ಯಾಂಕ್, ಮಡಿಕೇರಿ ಬ್ರ್ಯಾಂಚ್ ಖಾತೆ ಸಂಖ್ಯೆ 17392610016118 ಗೆ ರೂ.72,000/- ಹಣವನ್ನು ಡೆಪಾಸಿಟ್ ಮಾಡಿರುವ ಡೆಪಾಸಿಟ್ ಸ್ಲಿಪ್ ನ ದೃಢೀಕೃತ ನಕಲನ್ನು ನಿಪಿ-8 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ ಸುಳ್ಳು.

ಪ್ರಶ್ನೆ:3 ಫ್ರಾಸಾ-2 ಅಮೃತ ಹೆಚ್.ಎಸ್., ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಸರ್ಕಾರಿ ಕೆಲಸವನ್ನು ಹುಡುಕುತ್ತಿದ್ದು, 2022ನೇ ಇಸವಿಯಲ್ಲಿ ತಾನು ಮೈಸೂರಿನಲ್ಲಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಆಗ ಮಡಿಕೇರಿಯ ಅಂಬೇಡ್ಕರ್ ಭವನದಲ್ಲಿ ಕೆಲಸಕ್ಕಾಗಿ ಒಂದು ಸಂದರ್ಶನ ನಡೆಯುತ್ತಿದ್ದು, ಸದರಿ ಸಂದರ್ಶನಕ್ಕೆ ತಾನು ಕೂಡ ಹಾಜರಾಗಿದ್ದು, ಆಗ ಆರೋಪಿಯಾದ ನೀವು ತನಗೆ ಪರಿಚಯ ಆಗಿ ಕಂದಾಯ ಇಲಾಖೆ ಅಥವಾ ಆಹಾರ ಇಲಾಖೆಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರಾಗಿ ತನಗೆ ಸರ್ಕಾರಿ ಉದ್ಯೋಗವನ್ನು ಕೊಡಿಸುವುದಾಗಿ ಭರವಸೆಯನ್ನು ನೀಡಿದ್ದು, ಸದರಿ ಸರ್ಕಾರಿ

T. Jagadeesh

ಉದ್ಯೋಗಕ್ಕಾಗಿ ಸರ್ಕಾರಿ ಅಧಿಕಾರಿಗಳಿಗೆ ಹಣವನ್ನು ನೀಡಬೇಕಾಗುವುದಾಗಿ ನೀವು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ ಇಲ್ಲ.

ಪ್ರಶ್ನೆಃ4 ಫ್ರಾಸಾ–2 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 27.11.2022 ರಂದು ಫ್ರಾಸಾ–2 ರವರು ತಾಯಿಯಾದ ಫ್ರಾಸಾ–1 ರವರಿಗೆ ಫೋನ್ ಮೂಲಕ ಕರೆ ಮಾಡಿ ಆಹಾರ ಇಲಾಖೆಯಲ್ಲಿ ಜಿಲ್ಲಾ ಅಧಿಕಾರಿ ಹುದ್ದೆಯು ಖಾಲಿ ಇದ್ದು, ಸದರಿ ಹುದ್ದೆಗೆ ರೂ.20,00,000/– ಹಣ ಬೇಕಾಗಬಹುದೆಂದು ಬೇಡಿಕೆ ಇಟ್ಟಿದ್ದು, ಸದರಿ ಹಣವನ್ನು ಒಂದು ವಾರದ ಒಳಗಾಗಿ ನೀಡಬೇಕಾಗಿ ನೀವು ತಿಳಿಸಿದ್ದು, ಸದರಿ ಸರ್ಕಾರಿ ಹುದ್ದೆ ತನಗೆ ಸಿಗದಿದ್ದರೆ ನೀವು ನಿಮ್ಮ ಮನೆಯನ್ನು ಮಾರಿ ಸದರಿ ಹಣವನ್ನು ವಾಪಾಸ್ಸು ನೀಡುವುದಾಗಿ ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ ಇಲ್ಲ.

ಪ್ರ–5 ಫ್ರಾಸಾ–**2** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಫ್ರಾಸಾ–**2** ರವರ ತಾಯಿಯಾದ ಫ್ರಾಸಾ–**1** ರವರು ದಿನಾಂಕ **04.12.2022** ರಂದು ರೂ.**5,00,000/–** ದಿನಾಂಕ **23.02.2023** ರಂದು ರೂ.**2,00,000/–**, ದಿನಾಂಕ **04.03.2023** ರಂದು ರೂ.**3,95,000/–** ಹಾಗೂ **3,60,000/–**, ದಿನಾಂಕ **17.08.2023** ರಂದು ರೂ.**72,000/–** ಹಾಗೂ **29.09.2022** ರ ಮಧ್ಯದಿಂದ **07.09.2023**ರ ವರೆಗೆ ರೂ.**2,73,000/–** ಒಟ್ಟು ರೂ.**18,00,000/–** ಹಣವನ್ನು ಆರೋಪಿಯಾದ ನಿಮಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ ಇಲ್ಲ

ಪ್ರ–6 ಫ್ರಾಸಾ–**2** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನೀವು ಸದರಿ ಹಣವನ್ನು ಪಡೆದುಕೊಂಡು ಫ್ರಾಸಾ–**2** ರವರ ತಾಯಿಯಾದ ಫ್ರಾಸಾ–**1** ರವರಿಗೆ ಜೂಮ್ ಮೀಟಿಂಗ್ ಮೂಲಕ ಸದರಿ ಸರ್ಕಾರಿ ಕೆಲಸದ ತರಬೇತಿ ನೀಡಲಾಗುವುದೆಂದು ತನಗೆ ತಿಳಿಸುವಂತೆ ಹೇಳಿದ್ದು, ನಂತರದಲ್ಲಿ ತನಗೆ ಸರ್ಕಾರಿ ಹುದ್ದೆಯ ಯಾವುದೇ ನೇಮಕಾತಿ ಆದೇಶ ಬರದಿದ್ದು, ಫ್ರಾಸಾ–**1** ಮತ್ತು ಫ್ರಾಸಾ–**2** ರವರು ಎರಡೂವರೆ ವರ್ಷಗಳ ಕಾಲ ಸರ್ಕಾರಿ ಹುದ್ದೆಯ ನೇಮಕಾತಿ ಆದೇಶಕ್ಕಾಗಿ ಕಾದಿದ್ದು, ಯಾವುದೇ ಆದೇಶ ಬಾರದೇ ಇದ್ದಾಗ ತನಗೆ ಯಾವುದೇ ಸರಕಾರಿ ಹುದ್ದೆ ಬೇಡ ಎಂದು ತಿಳಿಸಿ ತಾವು ನೀಡದ ಹಣವನ್ನು ತಮಗೆ ಹಿಂದಿರುಗಿಸುವಂತೆ ಆರೋಪಿಯಾದ ನಿಮಗೆ

ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ ಸುಳ್ಳು

ಪ್ರ–7 ಫಿರ್ಯಾದಿ ಸಾ–**2** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ **27.02.2024** ರಂದು ಫಿರ್ಯಾದಿ ಸಾ–**2** ರವರ ತಾಯಿ ಆರೋಪಿಯಾದ ನಿಮ್ಮ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು, ದಿನಾಂಕ **11.03.2024** ರಂದು ಮಡಿಕೇರಿ ನಗರ ಪೊಲೀಸ್ ನವರು ನಿಮ್ಮನ್ನು ತನಿಖೆಗಾಗಿ ಕರೆದುಕೊಂಡು ಬಂದಿದ್ದು, ಆಗ ನೀವು ಫಿರ್ಯಾದಿ ಸಾ–**2** ರವರ ತಾಯಿಗೆ ಸದರಿ ಹಣದ ಮರುಪಾವತಿಗಾಗಿ ಚೆಕ್ಕುಗಳನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರಃ ಸುಳ್ಳು

ಪ್ರಶ್ನೆಃ8 ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ

ಏನೂ ಇಲ್ಲ.

ಪಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 19.05.2026ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

19/5/26

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್. ಸಿ.
ಮಡಿಕೇರಿ